**ಓ.ಎಸ್. ನಂ. 22/2021**

**ಪಿ.ಡಬ್ಲ್ಯು: 01 (Yashodamma)**

**<u>ದಿನಾಂಕ: 17.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ.B.S.P ವಕೀಲರಿಂದ.</u>**

ಸದರಿ ದಾವೆಯನ್ನು ನನ್ನ ಗಂಡನ ಭಾಗವನ್ನು ಕೇಳಿ ಹಾಕಿರುತ್ತೇನೆ. ನನ್ನ ಗಂಡನಿಗೆ ನಾಲ್ಕು ಜನರು ಒಡಹುಟ್ಟಿದವರು.ಸರ್ವೆ ನಂಬರ್ 410 ಕ್ಕೆ ಸಂಬಂಧಪಟ್ಟಂತೆ ವಿಸ್ತೀರ್ಣ 16 ಚಿಲ್ಲರೆ ಎಕರೆ ಇರುತ್ತದೆ. ಸದರಿ ಸರ್ವೆ ನಂಬರ್ ನ ಚೆಕ್ ಬಂದಿ ಪೂರ್ವಕ್ಕೆ ಎರ್ರಿಗೂಡ ಅಜ್ಜರವರ ಜಮೀನು, ಪಶ್ಚಿಮಕ್ಕೆ ಉಳ್ಳನಹಳ್ಳಿ ಗ್ರಾಮ, ಉತ್ತರಕ್ಕೆ ಪೂಜಾರಿ ಬಾಲಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಮಲ್ಲಜ್ಜಟ್ಟಿ ರವರ ಜಮೀನು.

ಸರ್ವೆ ನಂಬರ್ 408 ಕ್ಕೆ ಸಂಬಂಧಪಟ್ಟಂತೆ ವಿಸ್ತೀರ್ಣ 9 ಚಿಲ್ಲರೆ ಎಕರೆ ಇರುತ್ತದೆ. ಸರ್ವೆ ನಂಬರ್ 408 ಮತ್ತು ಸರ್ವೆ ನಂಬರ್ 410 ನನ್ನ ಅತ್ತೆ ಕರಡಿಮ್ಮನ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ್ 410 ಕ್ಕೆ ಸಂಬಂಧಪಟ್ಟಂತೆ ವಿಸ್ತೀರ್ಣ 03 ಚಿಲ್ಲರೆ ಎಕರೆ ಇರುತ್ತದೆ. ಅವುಗಳು ನನ್ನ ಅತ್ತೆಗೆ ನನ್ನ ಮಾವನ ಕಡೆಯಿಂದ ಬಂದಿರುತ್ತದೆ.

ನನ್ನ ಗಂಡ ತೀರಿಕೊಂಡು 20 ವರ್ಷ ಆಗಿರುತ್ತದೆ. ಎಷ್ಟನೇ ಇಸವಿಯಲ್ಲಿ ನನ್ನ ಅತ್ತೆ ತನ್ನ ಹೆಸರಿಗೆ ದಾವ ಸ್ವತ್ತುಗಳ ಖಾತ ಬದಲಾವಣೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತುಗಳು ಒಂದಕ್ಕೊಂದು ಅಂಟಿಕೊಂಡಿವೆ. ಅವುಗಳು ಬೇರೆ-ಬೇರೆ ಪಟ್ಟಿಯಲ್ಲಿ ಇವೆ ಎಂದರೆ ಸರಿಯಲ್ಲ. ವಕೀಲರಿಗೆ ಹೇಳಿ ದಾವ ಸ್ವತ್ತು 2-3 ನ ಚೆಕ್ ಬಂದಿ ಹೇಳಿ ಬರೆಸಿರುತ್ತೇನೆ. ನಾನು ದಾವ ಸ್ವತ್ತಿನ 2-3 ನ ಜಂಟಿ ಸ್ವಾಧೀನ ಇದ್ದಿದ್ದರೆ ದಾವ ಸ್ವತ್ತು 2-3 ನ ಚೆಕ್ ಬಂದಿ ಹೇಳಿ ಬರಿಸಿರುತ್ತಿದ್ದೆ ಎಂದರೆ ನಾನು ಹೇಳಿ ಬರೆಸಿರುತ್ತೇನೆ.

ನಾನು ದಿನಾಂಕ:-29.05.1997 ನೇ ಇಸವಿಯಲ್ಲಿ ಹೊಲ, ಮನೆ ಮತ್ತು ಕುರಿಗಳನ್ನು ತೆಗೆದುಕೊಂಡಿದ್ದು ನನಗೆ ದಾವ ಆಸ್ತಿಯಲ್ಲಿ ಭಾಗ ಬೇಡ ಎಂದು ಹಿರಿಯರ ಸಮ್ಮುಖದಲ್ಲಿ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಓ.ಎಸ್. ನಂ. 22/2021**

**ಪಿ.ಡಬ್ಲ್ಯು: 01 (Yashodamma)**

ನನ್ನ ಮಾವನಿಗೆ ದಾವ ಸ್ವತ್ತು 1 ರಲ್ಲಿ ಅರ್ಧಭಾಗ ಬಂದಿದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳಿರುವಂತೆ ಯಾವುದೇ ಭಾಗ ಬಂದಿರುವುದಿಲ್ಲ, ಅವುಗಳು ನನ್ನ ಗಂಡನ ಚಿಕ್ಕಪ್ಪನ ಹೆಸರಿಗೆ ಜಂಟಿಯಾಗಿ ಇದೆ ಎಂದರೆ ನನ್ನ ಮಾವ ದೊಡ್ಡರಳ್ಳಿ ಈರಪ್ಪನವರ ಹೆಸರಿಗೆ ಇದೆ.

ನಾನು ಈಗಾಗಲೇ ಭಾಗ ಪಡೆದುಕೊಂಡು ದಾಖಲಾತಿ ಬರೆದುಕೊಟ್ಟಿರುವ ಕಾರಣ ನನಗೆ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ.**

**ಮರು ವಿಚಾರಣೆ ಇಲ್ಲ.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಕೂಡ್ಲಿಗಿ.**